INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -4, July-August, 2025
PageNo,-61-70
Peer -Reviewed, Refereed Journal

# ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿಗಳು– ಒಂದು ವಿಶ್ಲೇಷಣಾತ್ಮಕ ಅಧ್ಯಯನ.

**ಡಾ.ದೊಡ್ಡಸಿದ್ದಯ್ಯ. ಪಿ.**[1]

ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಅಭಿವೃದ್ಧಿಯೆಂದರೆ ನೈಜ ತಲಾದಾಯದ ಬೆಳವಣಿಗೆ, ನಂತರ ಅಭಿವೃದ್ಧಿಯ ವ್ಯಾಖ್ಯಾನ ವಿತರಣೆಯ ಕಡೆಗೆ ಹಾಗೂ ಬಡತನ ಮತ್ತು ಅಸಮಾನತೆಯನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಬದಲಾವಣೆ ಕಂಡಿತು. ಆರ್ಥಿಕ ಅಭಿವೃದ್ಧಿಯು ವಸ್ತು ಕೇಂದ್ರಿತ ದೃಷ್ಟಿಕೋನದಿಂದ ಮಾನವ ಕೇಂದ್ರಿತ ವಿಷಯಕ್ಕೆ ಬದಲಾವಣೆ ಹೊಂದಿ ಮಾನವ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಿತು. ತಲಾದಾಯವು ಯಾವುದೇ ದೇಶದ ಆರ್ಥಿಕಾಭಿವೃದ್ಧಿಯ ಅಳತೆ ಮಾಡುವ ಸೂಚಿಯಲ್ಲ ಎಂಬ ವಿಷಯವನ್ನು ಮತ್ತು ಆರ್ಥಿಕಾಭಿವೃದ್ಧಿಯ ಸಮಸ್ಯೆಯನ್ನು ಅರ್ಥಮಾಡಿಕೊಂಡು, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (United Nation Development Programme) 1990ರಲ್ಲಿ ಮಾನವ ಅಭಿವೃದ್ಧಿ ಸೂಚಿ ಎಂಬ ವಿನೂತನ ಪರಿಕಲ್ಪನೆಯನ್ನು ಪರಿಚಯಿಸಿತು. ಹಾಗಾಗಿ ಪ್ರಸ್ತುತ ಎಲ್ಲಾ ರಾಷ್ಟ್ರಗಳಲ್ಲಿ ಮಾನವ ಅಭಿವೃದ್ಧಿಯ ಸೂಚಿಯು ಆರ್ಥಿಕಾಭಿವೃದ್ಧಿಯ ಅತ್ಯುತಮ ಮಾನದಂಡವಾಗಿದೆ ಹಾಗಾಗಿ ಪ್ರಪಂಚದ ಯಾವುದೇ ರಾಷ್ಟ್ರ ಆರ್ಥಿಕಾಭಿವೃದ್ಧಿ ಹೊಂದಬೇಕಾದರೆ ಅದು ಮಾನವ ಅಭಿವೃದ್ಧಿಗೆ ಮೊದಲ ಆದ್ಯತೆಯನ್ನು ನೀಡಬೇಕಾದ ಅನಿವಾರ್ಯತೆ ಇದೆ.

ಪ್ರಸ್ತುತ ಸಂಶೋಧನಾ ಲೇಖನಕ್ಕೆ “ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿಗಳು – ಒಂದು ವಿಶ್ಲೇಷಣಾತ್ಮಕ ಅಧ್ಯಯನ” ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದು ಈ ಸಂಶೋಧನಾ ಲೇಖನದ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ.

- ಮಾನವ ಅಭಿವೃದ್ಧಿ ಸೂಚ್ಯಾಂಕದ ಪರಿಕಲ್ಪನೆಯನ್ನು ಅರ್ಥೈಸುವುದು.

**[1].ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಶ್ರೀಕುವೆಂಪು ಮಹಾವಿದ್ಯಾಲಯ ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ, ರಾಮನಗರಜಿಲ್ಲೆ.**

- ಪ್ರಪಂಚದ ವಿವಿಧ ರಾಷ್ಟ್ರಗಳ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿಯನ್ನು ಹೋಲಿಕೆ ಮಾಡುವುದು.
- ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿಯನ್ನು ವಿಶ್ಲೇಷಿಸುವುದು.

ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP)ವು 1990 ರಿಂದ ಪ್ರತಿವರ್ಷ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟ ಮಾಡುತ್ತಿದೆ. 1990 ರ ವರದಿಯಲ್ಲಿ ಮಾನವ ಅಭಿವೃದ್ಧಿ ಅನುಸೂಚಿಯ (Human Development Index) ಮೂಲಕ ಪ್ರತಿಯೊಂದು ದೇಶದ ಮಾನವ ಅಭಿವೃದ್ಧಿಯನ್ನು ಮಾಪನ ಮಾಡುವ ಪ್ರಯತ್ನ ನಡೆಸುತ್ತಿದೆ. ಪಾಕಿಸ್ಥಾನದ ಖ್ಯಾತಅರ್ಥಶಾಸ್ತ್ರಜ್ಞ ಮಹಬೂಬ್ ವುಲ್ ಹಕ್ ಮತ್ತು ಅರ್ಥಶಾಸ್ತ್ರದಲ್ಲಿನ ನೊಬೆಲ್ ಪಾರಿತೋಷಕ ವಿಜೇತ ಭಾರತೀಯ ಅರ್ಥಶಾಸ್ತ್ರಜ್ಞ ಡಾ. ಅಮರ್ತ್ಯಸೇನ್ ಅವರುಗಳು ಈ ಅನುಸೂಚಿಯ ತಯಾರಿಕೆಗೆ ಸಾಕಷ್ಟು ಶ್ರಮಿಸಿದ್ದಾರೆ.

ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ(UNDP)ಯ ಪ್ರಕಾರ ಮಾನವ ಅಭಿವೃದ್ಧಿ ಎಂದರೆ "ಜನರ ಆಯ್ಕೆಯ ಪರಿಧಿಯನ್ನು ವಿಸ್ತರಿಸುವ ಪ್ರಕ್ರಿಯೆ" ಎಂದು ವ್ಯಾಖ್ಯಾನಿಸಿದೆ. (a process of enlarging people's choices) ಅಭಿವೃದ್ಧಿಯ ಎಲ್ಲಾ ಮಟ್ಟಗಳಲ್ಲಿ ಜನರಿಗೆ ಪ್ರಮುಖವಾಗಿ 3 ಆಯ್ಕೆಯು ಅತ್ಯಂತ ಅವಶ್ಯಕವಾಗಿದೆ. ಅವುಗಳೆಂದರೆ ದೀರ್ಘ ಮತ್ತು ಆರೋಗ್ಯವಂತ ಜೀವನ ನಡೆಸುವುದು, ಶಿಕ್ಷಿತರಾಗುವುದು ಮತ್ತು ಉತ್ತಮ ಜೀವನಮಟ್ಟವನ್ನು ಸಾಗಿಸುವುದು ಇವುಗಳಲ್ಲದೇ ಹೆಚ್ಚುವರಿ ಆಯ್ಕೆಗಳೆಂದರೆ ರಾಜಕೀಯ ಸ್ವಾತಂತ್ರ, ಇತರೆ ಖಾತ್ರಿಯಾದ ಮಾನವ ಹಕ್ಕುಗಳು ಮತ್ತು ಸ್ವಗೌರವದ ವಿವಿಧ ಅಂಶಗಳು.

ಮಾನವ ಅಭಿವೃದ್ಧಿ ಸೂಚ್ಯಾಂಕ (HDI) ಎಂಬುದು ಒಂದು ರಾಷ್ಟ್ರದ ಒಟ್ಟಾರೆ ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳನ್ನು ಮಾಪನ ಮಾಡುವ ಒಂದು ಸಾಂಖ್ಯಿಕ ವಿಧಾನವಾಗಿದೆ. ಇದು ಮಾನವ ಅಭಿವೃದ್ಧಿಯ 3 ಆಯಾಮಗಳಲ್ಲಿನ ದೇಶವೊಂದರ ಸರಾಸರಿ ಸಾಧನೆಗಳನ್ನು ಅಳತೆ ಮಾಡುತ್ತದೆ ಈ ಮೂರು ಆಯಾಮಗಳೆಂದರೆ ಜೀವನ ನಿರೀಕ್ಷೆ. ಶಿಕ್ಷಣದ ಪ್ರಾಪ್ತಿ ಮತ್ತು ಜೀವನ ಮಟ್ಟಗಳಾಗಿವೆ. ಈ ಮೂಲಭೂತ ಆಯಾಮಗಳಲ್ಲಿನ ಸಾಧನೆಗಳನ್ನು ಪರಿಗಣಿಸಿ ಮಾನವ ಅಭಿವೃದ್ಧಿ ಸೂಚಿಯನ್ನು ಮಾಪನ ಮಾಡಲಾಗುತ್ತದೆ.

ಮಾನವ ಅಭಿವೃದ್ಧಿ ಸೂಚಿಯನ್ನು ಮಾಪನ ಮಾಡುವ ಮೊದಲು ಈ ಸೂಚಿಯ 3 ಆಯಾಮಗಳಾದ ಜೀವನ ನಿರೀಕ್ಷೆ ಅನುಸೂಚಿ (Life Expectancy Index), ಶಿಕ್ಷಣದ ಪ್ರಾಪ್ತಿ ಅನುಸೂಚಿ (Educational Attainment Index) ಮತ್ತು ಜೀವನ ಮಟ್ಟ ಅನುಸೂಚಿ (Standard Living Index)

ಗಳಿಗೆ ಪ್ರತಿಯೊಂದಕ್ಕೆ ಪ್ರತ್ಯೇಕ ಸೂಚಿಯನ್ನು ಸೃಷ್ಟಿಸಲಾಗುತ್ತದೆ. ಈ ಸೂಚಿಗಳನ್ನು ಅಂದಾಜು ಮಾಡಲು ಪ್ರತಿಯೊಂದು ಸೂಚ್ಯಾಂಕಕ್ಕೆ ಕನಿಷ್ಟ ಮತ್ತು ಗರಿಷ್ಟ ಮೌಲ್ಯಗಳನ್ನು ಆಯ್ಕೆ ಮಾಡಿ ನಂತರ ಪ್ರತಿ ಆಯಾಮದ ಪ್ರಗತಿಯನ್ನು 0 ಯಿಂದ 1 ರವರೆಗಿನ ಮೌಲ್ಯದ ರೂಪದಲ್ಲಿ ಈ ಕೆಳಗಿನ ಸೂತ್ರದ ನೆರವಿನಿಂದ ಕಂಡುಹಿಡಿಯಲಾಗುತ್ತದೆ.

$$\text{ಅಂದಾಜು ಮಾಡಬೇಕಾಗಿರುವ ಆಯಾಮ ಅನುಸೂಚಿ} = \frac{\text{ನೈಜಮೌಲ್ಯ} - \text{ಕನಿಷ್ಟ ಮೌಲ್ಯ}}{\text{ಗರಿಷ್ಟ ಮೌಲ್ಯ} - \text{ಕನಿಷ್ಟ ಮೌಲ್ಯ}}$$

UNDP ಸಂಸ್ಥೆಯವರು 1990 ರಿಂದ ಪ್ರತಿವರ್ಷ ಸಹ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸುತ್ತಿದ್ದಾರೆ. ಪ್ರತಿ ವರದಿಯಲ್ಲಿಯೂ ಪ್ರತಿಯೊಂದು ದೇಶಕ್ಕೂ ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಕೊಡಲಾಗುತ್ತಿದೆ. ಜೊತೆಗೆ ಶ್ರೇಣಿ (Rank) ಯನ್ನು ನೀಡಲಾಗುತ್ತಿದೆ. ಪ್ರತಿಯೊಂದು ರಾಷ್ಟ್ರವು ಪಡೆಯುವ ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯದ ಆಧಾರದ ಮೇಲೆ ಆರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಮಟ್ಟವು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬ ಅಂಶ ಬೆಳಕಿಗೆ ಬರುತ್ತದೆ.

**ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯ ಮತ್ತು ರಾಷ್ಟ್ರಗಳ ವರ್ಗೀಕರಣ**

2024ರ ಮಾನವ ಅಭಿವೃದ್ಧಿ ವರದಿಯು ಮಾನವ ಅಭಿವೃದ್ಧಿಯಲ್ಲಿ ರಾಷ್ಟ್ರಗಳು ಸಾಧಿಸಿರುವ ಮಾನವ ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯದ ಆಧಾರದಲ್ಲಿ ವಿವಿಧ ರಾಷ್ಟ್ರಗಳನ್ನು 4 ಗುಂಪುಗಳಲ್ಲಿ ವರ್ಗೀಕರಿಸಿದೆ.

1. ಅತ್ಯುನ್ನತ ಮಾನವ ಅಭಿವೃದ್ಧಿಯ ದೇಶಗಳು : HDI ನ ಮೌಲ್ಯ 0.8 ಕ್ಕಿಂತ ಹೆಚ್ಚಿರಬೇಕು
2. ಉನ್ನತ ಮಾನವ ಅಭಿವೃದ್ಧಿಯ ದೇಶಗಳು : HDI ನ ಮೌಲ್ಯ0.8ಕ್ಕಿಂತಕಡಿಮೆ0.7ಕ್ಕಿಂತ ಅಧಿಕವಾಗಿರಬೇಕು.
3. ಮಧ್ಯಮ ಮಾನವ ಅಭಿವೃದ್ಧಿಯ ದೇಶಗಳು : HDIನ ಮೌಲ್ಯ 0.7ಕ್ಕಿಂತಕಡಿಮೆ 0.55 ಕ್ಕಿಂತ ಹೆಚ್ಚಾಗಿರಬೇಕು.
4. ಕನಿಷ್ಟ ಮಾನವ ಅಭಿವೃದ್ಧಿಯ ದೇಶಗಳು: HDIನ ಮೌಲ್ಯ 0.5ಕ್ಕಿಂತ ಕಡಿಮೆ ಇರುವ ರಾಷ್ಟ್ರಗಳು

2025ರ ಮಾನವ ಅಭಿವೃದ್ಧಿ ವರದಿಯು 2023 ನೇ ಸಾಲಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ಸೂಚಿಯ ಮೌಲ್ಯಗಳು ಮಾನವ ಅಭಿವೃದ್ಧಿ ಸೂಚಿಯ ದರ್ಜೆಗಳನ್ನು ನೀಡಿದೆ.

**ಅತ್ಯುನ್ನತ ಮಾನವ ಅಭಿವೃದ್ಧಿ ಸೂಚ್ಯಾಂಕ ಪಡೆದಿರುವ 10 ರಾಷ್ಟ್ರಗಳು – 2023**

| ರಾಷ್ಟ್ರ | HDI ನ ಮೌಲ್ಯ | ಶ್ರೇಣಿ |
|---|---|---|
| ಐಸ್ ಲ್ಯಾಂಡ್ | 0.972 | 1 |
| ನಾರ್ವೆ | 0.970 | 2 |
| ಸ್ವಿಟ್ಜರ್ ಲ್ಯಾಂಡ್ | 0.970 | 3 |
| ಡೆನ್ಮಾರ್ಕ್ | 0.962 | 4 |
| ಜರ್ಮನಿ | 0.959 | 5 |
| ಸ್ವಿಡನ್ | 0.959 | 6 |
| ಆಸ್ಟ್ರೇಲಿಯಾ | 0.958 | 7 |
| ಹಾಂಗ್‌ಕಾಂಗ್ ಮತ್ತು ಚೀನಾ | 0.955 | 8 |
| ನೆದರ್ ಲ್ಯಾಂಡ್ | 0.955 | 9 |
| ಬೆಲ್ಜಿಯಮ್ | 0.951 | 10 |

ಆಧಾರ : UNDP – HDR – 2025

2025ರ ಮಾನವ ಅಭಿವೃದ್ಧಿ ವರದಿಯ ಪ್ರಕಾರವಾಗಿ 193 ರಾಷ್ಟ್ರಗಳ ಪೈಕಿ ಮಾನವ ಅಭಿವೃದ್ಧಿಯ ಸಾಧನೆಯಲ್ಲಿ ಐಸ್‌ಲ್ಯಾಂಡ್ 0.972 ಮಾನವ ಅಭಿವೃದ್ಧಿ ಸೂಚ್ಯಾಂಕ ಮೌಲ್ಯವನ್ನು ಹೊಂದಿ ಮೊದಲನೆಯ ಸ್ಥಾನವನ್ನು ಪಡೆದಿದೆ. 2024ರ ವರದಿಯ ಪ್ರಕಾರ ಸ್ವಿಟ್ಜರ್‌ಲ್ಯಾಂಡ್ 0.967 ಮೌಲ್ಯವನ್ನು ಹೊಂದಿ ಮೊದಲನೇ ಸ್ಥಾನವನ್ನು ಪಡೆದಿತ್ತು. ಈ ವರದಿಯಲ್ಲಿ ಐಸ್‌ಲ್ಯಾಂಡ್ 0.959 ಮೌಲ್ಯವನ್ನು ಪಡೆದಿದೆ. ಬೆಲ್ಜಿಯಂ ರಾಷ್ಟ್ರ 0.951 ಮೌಲ್ಯವನ್ನು ಗಳಿಸಿ 10ನೇ ಸ್ಥಾನವನ್ನು ಪಡೆದಿದೆ. 2024ರ ವರದಿಯಲ್ಲಿ ಬೆಲ್ಜಿಯಂ ದೇಶ ಮೊದಲು 10ನೇ ಸ್ಥಾನದಲ್ಲಿ ಇರಲಿಲ್ಲ.

**ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚ್ಯಾಂಕ ಪಡೆದಿರುವ 10 ರಾಷ್ಟ್ರಗಳು: 2023**

| ರಾಷ್ಟ್ರ | HDI ನ ಮೌಲ್ಯ | ಶ್ರೇಣಿ |
|---|---|---|
| ಯಮೆನ್ | 0.470 | 184 |
| ಸಿರಿಯೊ ಲಿಯೊನೆ | 0.467 | 185 |
| ಬುರ್ಕಿನ ಫೆಸೊ | 0.459 | 186 |
| ಬುರುಂಡಿ | 0.489 | 187 |
| ಮಾಲಿ | 0.419 | 188 |
| ನೈಜೆರ್ | 0.419 | 189 |
| ಛಡ್ | 0.416 | 190 |
| ಸೆಂಟ್ರಲ್ ಅಫ್ರಿಕನ್ ರಿಪಬ್ಲಿಕ್ | 0.414 | 191 |
| ಸೋಮಾಲಿಯ | 0.404 | 192 |
| ಸೌತ್‌ಸುಡನ್ | 0.388 | 193 |

ಆಧಾರ: UNDP – HDR – 2025

ಈ ಪಟ್ಟಿಯಲ್ಲಿ ವ್ಯಕ್ತವಾದಂತೆ 2025ರ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಸೌತ್‌ಸುಡನ್ ರಾಷ್ಟ್ರವು 0.388 ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯವನ್ನು ಪಡೆದು 193 ನೇ ಸ್ಥಾನದಲ್ಲಿದೆ (193 ರಾಷ್ಟ್ರಗಳ ಪೈಕಿ) 2024ರ ವರದಿ ಪ್ರಕಾರ 0.381 ಮೌಲ್ಯವನ್ನು ಪಡೆದಿತು. ಯಮೆನ್ 0.470 ಮೌಲ್ಯವನ್ನು ಪಡೆದು ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚ್ಯಾಂಕ ಪಡೆದಿರುವ ರಾಷ್ಟ್ರಗಳಲ್ಲಿ 184ನೇ ಸ್ಥಾನವನ್ನು ಪಡೆದಿದೆ. 2024ರ ವರದಿಯಲ್ಲಿಯು 0.424 ಮೌಲ್ಯವನ್ನು ಹೊಂದಿ 184ನೇ ಸ್ಥಾನವನ್ನೇ ಪಡೆದಿತ್ತು.

**ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿ.**

ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿಯನ್ನು ಗಮನಿಸುವುದಾದರೆ 1990ರ ದಶಕದಿಂದಲೂ ಬದಲಾವಣೆಯಾಗುತ್ತಾ ಬಂದಿದೆ. 1991 ಭಾರತದ ಆರ್ಥಿಕ ಇತಿಹಾಸದಲ್ಲಿ

ಹಲವಾರು ಬದಲಾವಣೆಗಳಿಗೆ ಸಾಕ್ಷಿಯಾದ ವರ್ಷ. ಏಕೆಂದರೆ 1991ರಲ್ಲಿ ಭಾರತದಲ್ಲಿ ಹೊಸ ಆರ್ಥಿಕ ನೀತಿ ಜಾರಿಗೆ ಬಂತು ಜೊತೆಗೆ ಈ ಆರ್ಥಿಕ ನೀತಿಯಲ್ಲಿ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಅಂಶಗಳನ್ನು ಆಳವಡಿಸಿಕೊಂಡು ಆರ್ಥಿಕತೆಯಲ್ಲಿ ಹಲವಾರು ರೀತಿಯ ಅಮೂಲಾಗ್ರ ಬದಲಾವಣೆಗಳು ಉಂಟಾದವು. 1990 ರಿಂದ ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಕೆಲವು ವರ್ಷಗಳು ಏರಿಕೆಯಾದರೆ ಕೆಲವು ವರ್ಷಗಳಲ್ಲಿ ಇಳಿಕೆಯನ್ನು ಕಂಡಿದೆ 1990ರ ಮಾನವ ಅಭಿವೃದ್ಧಿ ವರದಿ ಪ್ರಕಾರ ಭಾರತದ ಸೂಚ್ಯಾಂಕ 0.434 ಆಗಿದ್ದು, 144 ರಾಷ್ಟ್ರಗಳ ಪೈಕಿ 114ನೇ ಸ್ಥಾನವನ್ನು ಪಡೆದಿತ್ತು. 2024ರ ವರದಿಯಂತೆ 0.644 ಸೂಚ್ಯಾಂಕದೊಂದಿಗೆ 193 ರಾಷ್ಟ್ರಗಳ ಪೈಕಿ 134 ನೇ ಸ್ಥಾನವನ್ನು ಹಾಗೂ 2025ರಲ್ಲಿ 130ನೇ ಸ್ಥಾನವನ್ನು ಪಡೆದು ಭಾರತ ವಿಶ್ವದ ಮಧ್ಯಮ ಮಾನವ ಅಭಿವೃದ್ಧಿಯನ್ನು ಹೊಂದಿರುವ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುತ್ತದೆ. 1990 ಮತ್ತು 2025ರ ನಡುವೆ ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕವು ಧನಾತ್ಮಕ ಬದಲಾವಣೆಯನ್ನು ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ.

**ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿ (1990 ರಿಂದ 2023)**

| **ವರ್ಷ** | **ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯ** | **ಪ್ರಪಂಚದ ಸರಾಸರಿ (HDI) ಮೌಲ್ಯ** |
|---|---|---|
| 1990 | 0.446 | 0.608 |
| 2000 | 0.501 | 0.651 |
| 2010 | 0.590 | 0.707 |
| 2015 | 0.633 | 0.731 |
| 2020 | 0.652 | 0.742 |
| 2021 | 0.647 | 0.742 |
| 2022 | 0.676 | 0.752 |

| | | |
|---|---|---|
| 2023 | 0.685 | 0.756 |

ಆಧಾರ: UNDP.HDR 2025

ಮೇಲಿನ ಪಟ್ಟಿಯಲ್ಲಿ ಸ್ಪಷ್ಟವಾದಂತೆ ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯ 1990ರಲ್ಲಿ 0.446 ಹಾಗೂ ಪ್ರಪಂಚದ ಸರಾಸರಿ ಮೌಲ್ಯ 0.608 ರಷ್ಟಾಗಿತ್ತು. ಹಾಗಾಗಿ ಪ್ರಪಂಚದ ಸರಾಸರಿಗಿಂತ ಕಡಿಮೆಯಿತ್ತು. ನಂತರದ ವರ್ಷಗಳಲ್ಲಿ ಬದಲಾವಣೆಗಳನ್ನು ಕಂಡು 2000ರಲ್ಲಿ 0.501 ಊಆಖ ಮೌಲ್ಯವನ್ನು ಹಾಗೂ 2023ರಲ್ಲಿ 0.685 ಮೌಲ್ಯವನ್ನು ಪಡೆದಿದೆ. ಈ ಪಟ್ಟಿಯನ್ನು ಗಮನಿಸಿದಾಗ ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರವೃತ್ತಿ ಏರಿಕೆ ರೂಪದಲ್ಲಿ ಇರುವುದು ಸ್ಪಷ್ಟವಾಗಿದೆ ಆದರೆ ಪ್ರಪಂಚದ ಸರಾಸರಿಗಿಂತ ಕಡಿಮೆ ಇದೆ.

**ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕ ಮತ್ತು ಅದರ ಮೂಲಾಂಶಗಳು (2023)**

| **ಕ್ರಮ ಸಂಖ್ಯೆ** | **ಘಟಕಾಂಶಗಳು** | **ಸರಾಸರಿ ಮೌಲ್ಯ** |
|---|---|---|
| 01 | ಮಾನವ ಅಭಿವೃದ್ಧಿ ಸೂಚ್ಯಾಂಕ ಮೌಲ್ಯ | 0.685 |
| 02 | ಜನನ ವೇಳೆಯಲ್ಲಿ ಸರಾಸರಿ ಜೀವಿತಾವಧಿ (ವರ್ಷಗಳಲ್ಲಿ) | 72 |
| 03 | ಶಾಲಾ ಶಿಕ್ಷಣದ ನಿರೀಕ್ಷಿತ ವರ್ಷಗಳು | 13 |
| 04 | ಶಾಲಾ ಶಿಕ್ಷಣದ ಸರಾಸರಿ (ವರ್ಷಗಳಲ್ಲಿ) | 6.9 |
| 05 | ಒಟ್ಟು ದೇಶಿಯ ನೈಜ ತಲಾ ವರಮಾನ (PPP US $) | 9047 |

**ಭಾರತದ ಮಾನವ ಅಭಿವೃದ್ಧಿ ಸೂಚ್ಯಾಂಕ ಮತ್ತು ಅದರ ಮೂಲಾಂಶಗಳ ಪ್ರವೃತ್ತಿ**

| **ವರ್ಷ** | **1990** | **2000** | **2005** | **2010** | **2015** | **2017** | **2021** | **2022** | **2023** |
|---|---|---|---|---|---|---|---|---|---|
| ಜನನ ವೇಳೆಯಲ್ಲಿ ಸರಾಸರಿ ಜೀವಿತಾವಧಿ (ವರ್ಷಗಳಲ್ಲಿ) | 57.9 | 62.5 | 64.5 | 66.7 | 68.6 | 69.2 | 67.7 | 67.7 | 72 |

| | | | | | | | | | |
|---|---|---|---|---|---|---|---|---|---|
| ಶಾಲಾ ಶಿಕ್ಷಣದ ನಿರೀಕ್ಷಿತ ವರ್ಷಗಳು | 7.6 | 8.3 | 9.7 | 10.8 | 12.0 | 12.3 | 11.9 | 12.6 | 13 |
| ಶಾಲಾ ಶಿಕ್ಷಣದ ಸರಾಸರಿ ವರ್ಷಗಳು | 3.0 | 4.4 | 4.8 | 5.4 | 6.2 | 6.5 | 6.5 | 6.6 | 6.9 |
| ಒಟ್ಟು ದೇಶಿಯ ನೈಜ ತಲಾ ಆದಾಯ(ಕಕಕ ಗಖ $) | 1787 | 2548 | 3217 | 4182 | 5391 | 6119 | 6.590 | 6951 | 9047 |
| ಊಆಖ ನ ಮೌಲ್ಯ | 0.446 | 0.501 | 0.536 | 0.590 | 0.633 | 0.652 | 0.647 | 0.676 | 0.685 |

ಆಧಾರ: UNDP – HDR 2025

ಈ ಪಟ್ಟಿಯಲ್ಲಿ ಸ್ಪಷ್ಟವಾದಂತೆ ಭಾರತದ ಮಾನವ ಅಭಿವೃದ್ಧಿಯ ಸೂಚ್ಯಾಂಕದ ಮೌಲ್ಯ 1990ರಲ್ಲಿ 0.446 ನಿಂದ 2023 ರವೇಳೆಗೆ 0.685 ಗೆ ಹೆಚ್ಚಿದೆ. ಜನನ ವೇಳೆಯಲ್ಲಿ ಸರಾಸರಿ ಜೀವಿತಾವಧಿ 1990 ರಿಂದ 2023ರ ವರೆಗೆ 57.9 ವರ್ಷಗಳಿಂದ 72 ವರ್ಷಕ್ಕೆ ಹೆಚ್ಚಳವಾಗಿದೆ. ಆದರೆ ಜಗತ್ತಿನ ಸರಾಸರಿ ಜನರ ಜೀವನ ನಿರೀಕ್ಷೆಯ ಅವಧಿ 73.4 ವರ್ಷಗಳಾಗಿವೆ. ಒಟ್ಟು ದೇಶಿಯ ನೈಜ ತಲಾದಾಯವು 1787 ಅಮೇರಿಕನ್ ಡಾಲರ್‌ಗಳಿಂದ 9047 ಡಾಲರ್‌ಗಳಿಗೆ ಏರಿಕೆ ಕಂಡಿದೆ.ಈ ವೇಳೆಯಲ್ಲಿ ಜಗತ್ತಿನ ಸರಾಸರಿ ಒಟ್ಟು ದೇಶಿಯ ನೈಜ ತಲಾ ವರಮಾನ 20,327 ಡಾಲರ್‌ಗಳಾಗಿದೆ ಹಾಗೆಯೇ ಭಾರತದ ಊಆಖ ನ ಮೌಲ್ಯವು ಕಡಿಮೆ ಇರುವುದು ಸ್ಪಷ್ಟವಾಗಿದೆ. ಜಾಗತಿಕ ಮೌಲ್ಯದಲ್ಲಿ ಭಾರತ ತನ್ನ ಮಾನವ ಅಭಿವೃದ್ಧಿ ಸೂಚಿಯನ್ನು ಸುಧಾರಿಸಬೇಕಾದರೆ ಶಿಕ್ಷಣ ಮತ್ತು ವೈದ್ಯಕೀಯ ಸೇವೆಗಳಿಗೆ ಮೊದಲ ಅದ್ಯತೆಯನ್ನು ನೀಡಬೇಕಾಗುತ್ತದೆ.

**ಭಾರತದ ವಾರ್ಷಿಕ ಸರಾಸರಿ ಮಾನವ ಅಭಿವೃದ್ಧಿ ಸೂಚಿಯ ಬೆಳವಣಿಗೆ**

| ವರ್ಷ | HDIಸರಾಸರಿ ಬೆಳವಣಿಗೆ ದರ ಶೇ |
|---|---|
| 1990 – 2000 | 1.17 |
| 2000 – 2010 | 1.65 |
| 2010 – 2023 | 1.16 |
| 1990 – 2023 | 1.31 |

ಆಧಾರ: UNDP-HDR 2025

ಈ ಮೇಲಿನ ಪಟ್ಟಿಯಲ್ಲಿ ಸ್ಪಷ್ಟವಾಗುವುದೆಂದರೆ ಭಾರತ 1990 – 2000 ಸರಾಸರಿ ಊಆಖ ಬೆಳವಣಿಗೆ ದರ ಶೇ 1.17 ಆಗಿದೆ, 2000–2010ರ ನಡುವೆ HDI ಬೆಳವಣಿಗೆ ಶೇ.1.65 ಹಾಗೂ 2010–2023ರಲ್ಲಿ ಶೇ.1.16ರ ಬೆಳವಣಿಗೆ ದರವನ್ನು ಹೊಂದಿದೆ. 2019ರ ಕೋವಿಡ್ 19 ಸರ್ವವ್ಯಾಧಿಯ ಕಾರಣದಿಂದಾಗಿ 2010–2023ರಲ್ಲಿ HDI ನ ಮೌಲ್ಯದ ಬೆಳವಣಿಗೆ ದರ ಕಡಿಮೆಯಾಗಿದೆ ಎಂಬುದು ಸ್ಪಷ್ಟವಾಗಿದೆ. ಹಾಗೆಯೇ 1990–2023ರ ಜಾಗತಿಕ ಮೌಲ್ಯ ಊಆಖ ನ ಮೌಲ್ಯದ ಸರಾಸರಿ ಬೆಳವಣಿಗೆ ದರ ಶೇ. 0.66 ರಷ್ಟಿದೆ.

1990 ಮತ್ತು 2023ರ ನಡುವೆ ಭಾರತದ ಮಾನವ ಅಭಿವೃದ್ಧಿ ಸೂಚಿಯ ಮೌಲ್ಯವನ್ನು ಗಮನಿಸಿದಾಗ ಭಾರತವು ಇನ್ನು ಸಹ ಮಧ್ಯಮ ಪ್ರಮಾಣದ ಮಾನವ ಅಭಿವೃದ್ಧಿಯ ಹಂತದಲ್ಲಿಯೇ ಇದೆ. ಅದು ಅತ್ಯುನ್ನತ ಮಾನವ ಅಭಿವೃದ್ಧಿಯ ಹಂತವನ್ನು ತಲುಪಲು ಕನಿಷ್ಟ ಇನ್ನು 30 ರಿಂದ 50 ವರ್ಷಗಳು ಬೇಕಾಗಬಹುದು. 2025ರ ಮಾನವ ಅಭಿವೃದ್ಧಿಯು ಅಂಕಿ–ಅಂಶಗಳನ್ನು ಗಮನಿಸಿದರೆ ಭಾರತ ಮಾನವ ಅಭಿವೃದ್ಧಿಯು ಕ್ಷೇತ್ರದಲ್ಲಿ ಇನ್ನು ಹೆಚ್ಚಿನದನ್ನು ಸಾಧಿಸಬೇಕಾದ ಅನಿವಾರ್ಯತೆ ಇದೆ.

ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕ ಮೌಲ್ಯ ಕಡಿಮೆಯಾಗಿರುವುದಕ್ಕೆ ಹಲವಾರು ಕಾರಣಗಳಿವೆ. ಆದಾಯ ಸಂಪತ್ತಿನ ಅಸಮತೋಲನ ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಹಾಗಾಗಿ ಎಲ್ಲಾರಿಗೂ ಸಹ ಗುಣಮಟ್ಟದ ಆರೋಗ್ಯ ಸೇವೆ ಶಿಕ್ಷಣ ಮತ್ತು ಅವಕಾಶಗಳ ಲಭ್ಯತೆಯನ್ನು ಕಡಿಮೆ ಮಾಡುತ್ತಿದೆ. ಲಿಂಗ ಅಸಮಾನತೆ ಭಾರತದಲ್ಲಿನ ಒಂದು ಸಾಮಾಜಿಕ ಪಿಡುಗಾಗಿದೆ. ಜಾಗತಿಕ ಲಿಂಗತ್ವ ಅಂತರ ಸೂಚ್ಯಾಂಕದಲ್ಲಿ 148 ದೇಶಗಳ ಪಟ್ಟಿಯಲ್ಲಿ 131ನೇ ಸ್ಥಾನವನ್ನು ಪಡೆದಿದೆ ಇದು ಜಾಗತಿಕ ಮಟ್ಟದಲ್ಲಿ ಲಿಂಗ ಸಮಾನತೆ ಸಾಧನೆ ಪ್ರಮಾಣವು ಉತ್ತಮವಾಗಿದ್ದರೂ ಭಾರತದಲ್ಲಿ ಕಳಪೆಯಾಗಿದೆ, ಜಾಗತಿಕ ಮಟ್ಟದ ಲಿಂಗತ್ವ ಸಮಾನತೆ ಸಾಧಿಸಲು 123 ವರ್ಷಗಳು ಬೇಕು ಎಂದು ವರದಿಗಳು ಅಂದಾಜಿಸಿವೆ. ಜೊತೆಗೆ ಭಾರತ ರಾಜಕೀಯ ಸಶಕ್ತೀಕರಣದಲ್ಲಿ ಹಿಂದೆ ಬಿದ್ದಿದೆ ಹಾಗಾಗಿ ಮಹಿಳಾ ಸಶಕ್ತೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮಹಿಳೆಯರಿಗೆ ಆರ್ಥಿಕ ಸಂಪನ್ಮೂಲಗಳು ನ್ಯಾಯಯುತವಾಗಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಜನರು ಹೆಚ್ಚು ಸಾಮಾಜಿಕ ಮೂಲಭೂತ ಸೌಕರ್ಯಗಳು ಕೊರತೆಯಿಂದ ಬಳಲುತಿದ್ದಾರೆ ಹಾಗಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಎಲ್ಲಾ ಜನರಿಗೆ ತಲುಪುವಂತೆ ಮಾಡಲು ಹೆಚ್ಚು ಹೂಡಿಕೆಯನ್ನು ಕೈಗೊಳ್ಳುವ ಅನಿವಾರ್ಯತೆ ಇದೆ ಹಾಗೆಯೇ ಸರ್ಕಾರ ಮಾನವ ಅಭಿವೃದ್ಧಿಯ ಸುಧಾರಣೆಯ

ಧ್ಯೇಯ ವಾಖ್ಯೆಯನ್ನು ಹೊಂದಿ ಅದಕ್ಕೆ ಸರಿಹೊಂದುವಂತಹ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಆಗ ಮಾತ್ರ ಮಾನವ ಅಭಿವೃದ್ಧಿ ಸೂಚ್ಯಾಂಕದ ಮೌಲ್ಯದಲ್ಲಿ ಇನ್ನಷ್ಟು ಬದಲಾವಣೆಯನ್ನು ಭವಿಷ್ಯದಲ್ಲಿ ನಿರೀಕ್ಷಿಸಬಹುದು.

**ಪರಾಮರ್ಶನ ಗ್ರಂಥಗಳು**

1. UNDP Human Development Report, various Issues.
2. Datt and Sundaram(2024) Indian Economy, S Chand Publication, New Delhi.
3. Agarwal A.N (2019) Indian Economy, New Age International Publication, New Delhi.
4. https:// www.undp.org

5.ಎಚ್ಚಾರ್ಕೆ (2024) ಭಾರತದ ಆರ್ಥಿಕ ವ್ಯವಸ್ಥೆ, ಸಪ್ನ ಬುಕ್‌ಹೌಸ್, ಬೆಂಗಳೂರು.